ISSN: 2347-2723 IMPACT FACTOR : 2.0260(UIF)

REVIEW OF LITERATURE

VOLUME - 4 | ISSUE - 11 | JUNE - 2017



## ಹರಿಹರನ 'ಬಸವರಾಜದೇವರ ರಗಳೆ' ಒಂದು ಅವಲೋಕನ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**

'ಬಸವರಾಜದೇವರ ರಗಳೆ'ಯ ಕರ್ತೃ ಹಂಪೆಯ ಮಹಾಕವಿ ಹರಿಹರದೇವ, ಹರಿಹರ ಭಕ್ತ ಕವಿಯಾಗಿ ಬಸವಣ್ಣನ ಭಕ್ತಿಯನ್ನು ದರ್ಶಿಸಿದ ಮಹಾನ ಕವಿ ಇತನು 12ನೇ ಶತಮಾನದ ಶಿವಶರಣರಲ್ಲಿ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬನಾದ ಬಸವಣ್ಣನ ಕುರಿತು ರಚಿಸಿದ ಪ್ರಾಚೀನ ಕೃತಿಗಳಲ್ಲಿ  ಒಂದು. ಈ ಕೃತಿಯು ಮೊಟ್ಟಮೊದಲು ಎಂದು ಹೇಳಲಾಗಿದೆ. ಈ ಕೃತಿಯು ಬಸವ ಕೇಂದ್ರಿತ ವೀರಶೈವ ಕೃತಿಯ ಪರಂಪರೆಯಲ್ಲಿ ಮೂಡಿ ಬಂದಿರುವದು ಒಂದು ವಿಶೇಷತೆಯಾಗಿದೆ ಈ ಕೃತಿಗಳಲ್ಲಿ 13 ಸ್ಥಲಗಳನ್ನು ಒಳಗೊಂಡಿರುವುದಲ್ಲದೇ ಕೊನೆಯ ಸ್ಥಲದಲ್ಲಿ ಅವಸರದಿಂದ ಹರಿದು ಮುಕ್ತಾಯವಾದಂತೆ ಭಾಸವಾಗುತ್ತದೆ.

ಈ ಕೃತಿಯ ಆರಂಭ ಬಸವಣ್ಣನ ಹುಟ್ಟಿರುವುದಕ್ಕೆ ಕಾರಣದಿಂದ ಕೊನೆಗೆ ಬಸವನ ಭಕ್ತಿಯು ಔನ್ನತ್ಯದ ಮಟ್ಟಕ್ಕೇರಿರುವುದಾಗಿದೆ. ಬಸವನ ಪವಾಡಗಳಲ್ಲಿ ಅವನ ವ್ಯಕ್ತಿತ್ವವು ತುಂಬಾ ಮಾರ್ಮಿಕವಾಗಿ ಚಿತ್ರಿಸಿದ್ದಾನೆ. ಹರಿಹರ ಈ ಕೃತಿಯ ಶೀರ್ಷಿಕೆಯ ಸೂಚಿಸುವಂತೆ ಬಸವಣ್ಣ ಹರಿಹರ ಕವಿಯ ದೃಷ್ಟಿಯಲ್ಲಿ ಅಧಿಕಾರಿಯಲ್ಲ. ಮಂತ್ರಿಯಲ್ಲ ಆತ 'ರಾಜ' ಈ ರಾಜನ ಶಕ್ತಿ–ಸಾಮರ್ಥ್ಯಗಳಿಂದ ದೇವನಾದವನ ರಗಳೆಯಿದು. ಈತನೊಬ್ಬ ಕಾರಣಿಕ ಪುರುಷ.

ಬಸವನು ಕೈಲಾಸದಲ್ಲಿ ವೃಷಭ ಮುಖನಾಗಿದ್ದ ಗಣೇಶ್ವರನು. ಶಿವನು ಎಲ್ಲರಿಗೂ ಪ್ರಸಾದ ವಿನಿಯೋಗಿಸುವ ಕಾರ್ಯವನ್ನು ವಹಿಸಿದಾಗ ಸರಿಯಾಗಿ ಮಾಡದ ಕಾರಣಕ್ಕಾಗಿ ಹುಸಿಯನ್ನು ನುಡಿಯುತ್ತಾನೆ. ಕುಮಾರನಿಗೆ ಪ್ರಸಾದ ನೀಡಿರುವುದಿಲ್ಲ. ಕೊಟ್ಟಿದ್ದೇನೆ ಎಂದು ಹೇಳಿದಕ್ಕಾಗಿ ಭೂಲೋಕದಲ್ಲಿ ಪ್ರಸಾದದ ಮಹಿಮೆಯನ್ನು ತೋರಿಬರಬೇಕೆಂದು ಶಿವನ ನಿರೂಪವಾಯಿತು.

ನಂತರ ಬಾಗೆವಾಡಿಯ ಮಾದರಸ ಮಾದಾಂಬೆಯರಿಗೆ ಮಗನಾಗಿ ಹುಟ್ಟಿದನು. ಬಾಲ್ಯದಲ್ಲಿಯೇ ತಾಯ್ತಂದೆಗಳನ್ನು ಕಳೆದುಕೊಂಡು ಶಿವಭಕ್ತಿಯ ಮುತ್ತಬ್ಬೆಯ ಆಶ್ರಯದಲ್ಲಿ ಬೆಳೆಯುವನು. ಪ್ರಾಯದಲ್ಲಿ ಶಿವಭಕ್ತಿಯ ತುಡಿತ ಬಲವಾಗಿ ತನ್ನ ಬ್ರಾಹ್ಮಣ್ಯತ್ವವನ್ನು ಬಿಟ್ಟು ಕಪ್ಪಡಿಯ ಸಂಗಮಕ್ಕೆ ಬಂದು, ಅಲ್ಲಿಯ ಶಿವಾಲಯವನ್ನು ಕಂಡು ಭಕ್ತಿ ಪರವಶನಾಗಿ ಮೂರ್ಛೆ ಹೋಗಿರಲು ಹರನ್ನೇ ಈತನ ಮನದ ಮೊನೆಯಲ್ಲಿ ನಿಂತು **"ಅಂಜದಿರು ಅಂಜದಿರು ಮಗನೇ, ಹುಟ್ಟಿನ ಸರಮಾಲೆಯಲ್ಲಿ ಸಿಕ್ಕಿದ ಹಾಗೆ ನಿನನ್ನು ಸಲಹುತ್ತೇವೆ; ಲೋಕ ಮೆಚ್ಚುವಂತೆ ನಿನ್ನನ್ನು ಮೆರೆಸುತ್ತೇವೆ."**[1] ಎಂದು ಹೇಳಿದಂತಾಯಿತು. ಬಸವಣ್ಣನು ಈಶಾನ್ಯ ಗುರುಗಳು ಈತನನ್ನು ಕಾರಣಿಕನಾಗಿರಬೇಕೆಂದು ನಿಶ್ಚಯಿಸಿ, ಎಲೆ ಭಕ್ತಾ ನೀನು ಎಲ್ಲಿಗೂ ಹೋಗಬೇಡ, ಯಾವುದಕ್ಕೂ ಚಿಂತಿಸಬೇಡ, ಹೊಸ ಹೂವುಗಳನ್ನು ಶುದ್ಧ ನೀರು ತಂದು ಸಂಗಮೇಶ್ವರನನ್ನು ಪೂಜಿಸಿ ಪ್ರಸಾದವನ್ನು ಸುಖದಿಂದ ಸ್ವೀಕರಿಸುತ್ತಾ ಸಂಗನ ಸೇವೆಯಲ್ಲಿ ನಿರತನಾಗು ಎಂದು ಹೇಳಿದ್ದನು.

ಹೀಗೆ ಬಸವರಾಜನು ಒಂದು ದಿನ ಸಂಧ್ಯಾಕಾಲದ ಪೂಜೆಯನ್ನು ಮುಗಿಸಿ ಪ್ರಸಾದವನ್ನು ಸ್ವೀಕರಿಸಿ ಸಂಗಮನನ್ನೇ ನೆನೆಯುತ್ತಾ ನಿದ್ರಾವಸ್ಥೆಯಲ್ಲಿದ್ದನು. ಆಗ ಅವನ ಕನಸಿನಲ್ಲಿ ಶಿವನು ಕಾಣಸಿಕೊಂಡು. **"ಎಲೆ ಮಗನೆ, ಬಸವ, ಬಸವಣ್ಣ, ಬಸವಿದೇವ ನಿನ್ನನ್ನು ಲೋಕದಲ್ಲಿ ಮೆರೆಸುತ್ತೇವೆ. ಬಿಜ್ಜಳರಾಯನಿರುವ ಮಂಗಳವಾಡಕ್ಕೆ ಹೋಗು"**[2] ಎಂದಂತಾಯಿತು. ಆಗ ಎಚ್ಚರನಾಗಿ ಕಂಡ ಕನಸ್ಸಿನಿಂದ ದುಃಖಿಸುತ್ತಾ ಮತ್ತೆ ಮೂರ್ಛೆ ಬಿಳುತ್ತಾನೆ. ಸ್ವಲ್ಪ ಸಮಯದ ನಂತರ ಎಚ್ಚರವಾಗಿ ಮನಸಿಲ್ಲದೆ ಶಿವನ ಪೂಜೆಯನ್ನು ಮಾಡಿ, ಪ್ರಸಾದವನ್ನು ಸ್ವೀಕರಿಸದೆ ಅತೀ ಬೇಸರದಿಂದ ಬಸವ ಮಲಗಿಬಿಟ್ಟನು.

ಸಂಗಮೇಶ್ವರನು ಭಕ್ತನ ಕನಸ್ಸಿನಲ್ಲಿ ಮತ್ತೆ ಕಾಣಿಸಿಕೊಂಡು **"ಎಲೆ ಮಗನೆ, ಎಲೆ ಕಂದ, ಎಲೆ ಬಸವ ನಿನ್ನನಗಲಿ ನಾನಿರಲಾರೆ ನಿನಗಿನಿತು ನಿರೋಧವೇಕೆ? ಬೇಡೆನ್ನರಸ ಬೇಡನ್ನ ಭಕ್ತನಿಧಿಯೆ ನಿನ್ನೊಡನೊಡನೆ ಬಿಡದೆ ಬಪ್ಪೆಂ' ಎಂದು ಸಂತೈಸಿ ನಾಳೆ ಮಧ್ಯಾಹ್ನದಲ್ಲಿ ಶುಧಾಂಗನಾಗಿ ನಂದಿಕೇಶ್ವರನ ಮುಂದೆ ನೆನವುತ್ತ ಕುಳಿತುಕೋ ವೃಷಭನ ಮುಖದಿಂದ ನಾನು ಬರುತ್ತೇನೆ."**[3] ಇಷ್ಟಾದರೂ ಬಸವ ಕಪ್ಪಡಿ ಸಂಗಮದಲ್ಲಿಯೇ ಇರುವುದನ್ನು ಬಯಸುತ್ತಾನೆ. ಆಗ ಶಿವನು ಆದೇಶಿಸುತ್ತಾನೆ.

ಮುಂದೆ ನಿಂತಿದ್ದ ಬಸವನನನ್ನು ಕಂಡು ಸಂಗಮ ಮರುಗಿದನು. ಬಂದು ಅಪ್ಪಿಕೊಂಡು ಕಣ್ಣೀರನ್ನು ಒರಸಿ **"ಅಳಬೇಡ ಕಂದ, ನಿನ್ನೊಡನೆ ಬರುತ್ತೇನೆ ನಿನ್ನಾಣೆಯಾಗಿಯೂ ಬರುತ್ತೇನೆ"**[4] ನೋಡು! ನೀನು ಬಿಟ್ಟು ಇರಲು ನನಗೆ ಆಗುವುದಿಲ್ಲ ಅಳು ನಿಲ್ಲಿಸು ಎಂದು ಮುಂತಾಗಿ ನುಡಿದು ಅವನನ್ನು ಸಂತೈಸಿದನು.

ಬಸವನಿಗೆ ಸಂಗನು ಮತ್ತೆ ವಿಶ್ವಾಸದ ಮಾತುಗಳನ್ನಾಡುತ್ತಾನೆ, ಹೇಗೆಂದರೆ **"ನೀನು ನಿಂದಲ್ಲಿ ನಿಲ್ಲುವೆ, ನಡೆದಲ್ಲಿ ನಡೆವೆ"**[5] ಎಂದು ಮುಂತಾಗಿ ಭರವಸೆಯಿತ್ತನು. ಈ ರೀತಿ ಪ್ರಯಾಣ ಮಾಡಿದಕ್ಕೆ ಬಸವ ಮಂಗಳವಾಡಕ್ಕೆ ಹೋಗಲು ನಿರ್ಧರಿಸಿದೆ.

ಬಸವಣ್ಣ ಮಂಗಳವಾಡದಲ್ಲಿ ಬಿಜ್ಜಳ ರಾಯನ ಅರಮನೆಗೆ ಬಂದನು. ಅಲ್ಲಿ ಅರಮನೆಯ ಆದಾಯ ಲೆಕ್ಕಚಾರದಲ್ಲಿ ತಪ್ಪು ಮಾಡಿದನು ಬಸವಣ್ಣನು ಅಲ್ಲಿಯ ಸಿದ್ಧರಸನೆಂಬ ದಂಡಾಧೀಶನಾದವನಿಗೆ ತಿಳುಸುತ್ತಾನೆ. ಇದರಿಂದ ಆ ಸಿದ್ಧರಸ ಬಸವನ ಪ್ರತಿಭೆ ಮೆಚ್ಚಿ ಅವನಿಗೆ ಬಿಜ್ಜಳನ ಅಪ್ಪಣೆಯನ್ನು ಪಡೆದು ಗಣಕನನ್ನಾಗಿ ನೇಮಿಸಿಕೊಳ್ಳುತ್ತಾನೆ ಸಿದ್ಧರಸನ ಸಂಬಧಿಯಾಗಬೇಕು, ಕುಲ–ಗೋತ್ರ ಒಂದೇ ಎಂದು ಗೊತ್ತಾಯಿತು. ಅವನ ಮೇಲೆ ಪ್ರೀತಿಯು ಅತೀಯಾಗಿತ್ತು ಸಿದ್ಧರಸನು ಲಿಂಗೈಕ್ಯನಾದನು. ಆಗ ಅವನ ಸಿರಿ ಸಂಪತ್ತು ಹಾಗೂ ಅಧಿಕಾರವು ಬಸವಣ್ಣನ ಸೊತ್ತಾಯಿತ್ತು.

ಕೆಲವು ದಿನಗಳ ನಂತರ ಗಂಗಾದೇವಿ ಮಾಯಾದೇವಿ (ಮಾಯಿದೇವಿ)ಯರನ್ನು ಮದುವೆಯಾಗಿ ಸುಖೋಪಜೀವನ ಸಾಗಿಸುತ್ತಾನೆ. ಬಸವಣ್ಣ ಕೆಲಕಾಲದಲ್ಲಿಯೇ ಪ್ರಾಮಾಣಿಕ ಸೇವೆಯಿಂದ ಅತ್ಯುನ್ನತ ಪದವಿಯನ್ನು ಪಡೆಯುತ್ತಾನೆ. ಆದ್ದರಿಂದ ಪರಸಮಯಿಗಳಾದ ನಾರಣಕ್ರಮಿತ, ಸೌರಭಟ್ಟ, ವಿಷ್ಣುಪೆದ್ದಿಗಳು ವಿರೋಧಿಗಳಾಗಿದ್ದರು. ಕೇದಿಗೆ ಶಿವಪೂಜೆಗೆ ತಕ್ಕುದಲ್ಲವೆಂದು ಆಗಮವಾಕ್ಯವಿದೆ ಎಂದು ಚಾಡಿಹೇಳಿದರು. ಆ ಚಾಡಿಯ ಮಾತು ಬಸವಣ್ಣನಿಗೂ ಕೇಳಿಸಿ ಮರುಳೇ, ಭಕ್ತರೇ ಕೊಟ್ಟರೆ ದೇವರು ಒಲ್ಲೆನೆನ್ನನು ಎಂದು ಹೇಳಲು ಅದಕ್ಕೆ ಕುರುಹೇನು ಎಂಬ ಬಿಜ್ಜಳನ ಪ್ರಶ್ನೆ ಈತನನ್ನು ಕೆಣಕಿತು. ಎಲ್ಲರ ಲಿಂಗದ ಮೇಲೆ ಕೇದಿಗೆಯ ಎಸಳನ್ನು ತೋರಿಸಿದನು. ಇದರಿಂದ ಬಿಜ್ಜಳನು ತಪ್ಪು ದಂಡವೆಂದು 12,000 ಹೊನ್ನುಗಳನ್ನು ಕೊಟ್ಟು ಕೊಂಡಾಡಿ ಗೌರವಿಸುತ್ತಿದ್ದನು.

ಬಿಜ್ಜಳನು ಬಸವನನ್ನು ಪರಿಪರಿಯಾಗಿ ಪರೀಕ್ಷಿಸುತ್ತಾನೆ. ಪ್ರತಿ ಪರೀಕ್ಷೆಯಲ್ಲಿ ಸತ್ಯದ ನಿಲುವಿನಲ್ಲಿರುವ ಬಸವಣ್ಣನಿಗೆ ಗೆಲುವುಟಾಂಗುತ್ತದೆ. ಮಾನವೀಯ ಮೌಲ್ಯಗಳನ್ನು ಸಕಲರಿಗೂ ತಿಳುಸುತ್ತಿರುವ ಬಸವನ ವಚನಗಳು. ಬಸವ ಭೇದ–ಭಾವವನ್ನು ತೊಲಗಿಸುತ್ತಾ ಅನೇಕ ಅದ್ಭುತ ಘಟನೆಗಳಿಗೆ ಭಕ್ತಿ ಭಂಡಾರಿ ಬಸವಣ್ಣ ಕಾರಣಿಕ ಪುರುಷನಾಗಿ ಕಂಗೋಳಿಸುತ್ತಾನೆ.

ಬಸವಣ್ಣನ ವ್ಯಕ್ತಿತ್ವವನ್ನು ಹರಿಹರನು ಚಿತ್ರಿಸಿರುವ ಪವಾಡಗಳ ರೂಪದಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿತಗೊಂಡಿದೆ ಎನ್ನಬಹುದು. ಆ ಪವಾಡಗಳು ಈ ರೀತಿಯಾದ ಕರಣ ಶಾಲೆಯ ಪವಾಡ, ಕೇದಿಗೆ ಹೂವಿನ ಪವಾಡ, ಭಂಡಾರ ಹಣದ ಪವಾಡ, ಬದನೆಕಾಯಿ ಶಿವಲಿಂಗವಾಗಿಸಿದ ಪವಾಡ, ಜಂಗಮ ಹಿಂತಿರುಗಲು ಮತ್ತೆ ಪ್ರಾಣ ಹಿಂತಿರುಗಿದ ಪವಾಡ, ನಾಗಿದೇವನ ಉಂಗುಟದಿಂದ ಕ್ಷೀರಧಾರೆಯನ್ನಾಗಿಸಿದ ಪವಡ, ಶಿನ್ನರ ಬೊಮ್ಮಯ್ಯನ ಉಳ್ಳಿಯ ಪ್ರಸಂಗ, ಮಹದೇವ ಸೆಟ್ಟಿಯವರಿಗೆ ನವರತ್ನದ ಪವಡ. ಸುಖ ಜಂಗಮರೂಪದ ಶಿವನಿಗೆ ತನ್ನ ಸತಿಯನ್ನೇ ಅರ್ಪಿಸದ್ದು, ಲೆಂಕರಸನೆಯ ಭಕ್ತನಿಗೆ ಒಲೆಗಳನ್ನು ಕೊಡಿಸಿದ್ದು.

ಈ ರೀತಿ ಹರಿಹರನು ಬಸವಣ್ಣನ ವ್ಯಕ್ತಿತ್ವವನ್ನು ಉನ್ನತಿಗೇರಿಸಲು ನಡೆದಂತಹ ಹಲವು ಘಟನೆಗಳಲ್ಲಿ ಕಲ್ಪನೆಯ ಹೊದಿಕೆ ಹೊದಿಸಿ ಪವಾಡಗಳನ್ನಾಗಿ ಚಿತ್ರಿಸಿದ್ದಾನೆ. ಈ ಪವಾಡದಲ್ಲಿ ಬಸವನ ವ್ಯಕ್ತಿತ್ವವು ತುಂಬಾ ಸ್ವಾರಸ್ಯಕರವಾಗಿ ಮೂಡಿಬಂದಿರುವುದಾಗಿದೆ. ಈತನ ವ್ಯಕ್ತಿತ್ವವು ಪವಾಡವನ್ನು ಆಧರಿಸಿ ತಿಳಿಯುವುದಾದರೆ ತೀಕ್ಷ್ಣಬುದ್ಧಿ, ದಲಿತೋದ್ಧಾರಕ, ಕಾಯಕವೇ ಕೈಲಾಸ, ಕಪಟಿಗಳ ಮನ ಪರಿವರ್ತನೆ, 'ಕೊಡುವವ ಸಂಗಮ ಕೊಂಬುವವ ಸಂಗಮ' ಪ್ರಾಣಿಗಳಿಗೂ ನೋವು ಆಗುವುದು ಎಂಬ ಕಲ್ಪನೆಯುಳ್ಳವ, ಜಂಗಮ ಸೇವೆಗಾಗಿ ತನು – ಮನ – ಧನವನ್ನು ಮುಡಿಪಾಗಿಟ್ಟ, ವಿಚಾರವಾದಿ ಮಾನವೀಯ ಮೌಲ್ಯಗಳ ಪಾಲಕ, ಉದಾತ್ತನಾದ, ಭಕ್ತನ ಪರೀಕ್ಷೆಯಲ್ಲಿ ಶಕ್ತಿ –ಸಾಮರ್ಥ್ಯಗಳನ್ನು ಲೋಕದಲ್ಲಿ ಮೆರೆಸುವ ಸನ್ನಿವೇಶ, ಸತಿಯನ್ನು ತಾಯಿಯಾಗಿ ಪೂಜಿಸುವ ಮಹಾನ ಮನೋಭಾವವುಳ್ಳವನು, ಪರರಿಗೆ ಬೇಕಾದ ವಸ್ತು ಕೇಳದೆ ಕೊಡುವ, ಬಸವ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಎಲ್ಲ ಕ್ಷೇತ್ರದಲ್ಲಿ ಪರಿಗಣಿತನಾದವನು.

ಹರಿಹರನ ದೃಷ್ಟಿಯಲ್ಲಿ ಬಸವಣ್ಣ ಕಾರಣೀಕ ಪುರುಷ, ಭಕ್ತಿ ಭಂಡಾರಿ, ನಿರ್ಮಲವಾದ ಶುದ್ಧ ಚಾರಿತ್ರ್ಯ ಹೊಂದಿರುವ ವ್ಯಕ್ತಿಯೆಂದು ಜನಸಾಮಾನ್ಯರಿಗೆ 'ಬಸವರಾಜ ದೇವನಾಗಿ ಕಾಣಿಸುವಂತೆ' 'ಹರಿಹರನು ಚಿತ್ರಿಸಿದ್ದಾನೆ. 'ಬಸವನು ಸಂಗನನ್ನಾಗಿ, ಸಂಗಮ ಬಸವನ್ನಾಗಿ' ಇರುವುದರಂತೆ ಬಸವಣ್ಣನ ವ್ಯಕ್ತಿತ್ವದ ಮೇಲೆ ವಿಶೇಷವಾದ ಪ್ರಭಾವ ಬೀರಿದ್ದಾನೆ. ಹರಿಹರ ಭಕ್ತ ಕವಿಯಾಗಿ ಭಕ್ತಿಭಂಡಾರಿಯಾದ ಬಸವಣ್ಣನನ್ನು ಚಿತ್ರಿಸಿದ್ದು ಅದ್ಭುತವೆಂದೆ ಹೇಳಬಹುದು. ಹರಿಹರನು ಬಸವನನ್ನು ಒಬ್ಬ 'ರಾಜ'ನಾಗಿ 'ದೇವ'ನನ್ನಾಗಿಸಿರುವುದು ಒಂದು ಕಲ್ಪನೆಯೆನಿಕೆಗೆ ಮುಟ್ಟಿದ್ದಾಗಿದೆ.

**ಅಡಿಟಿಪ್ಪಣಿಗಳು**

1 ದೇವೀರಪ್ಪ ಎಚ್: ಬಸವರಾಜದೇವರ ರಗಳೆ . ಪು.21 . ಬಸವ ಸಮಿತಿ, ಬಸವ ಭವನ ಬೆಂಗಳೂರು.
2 ದೇವೀರಪ್ಪ ಎಚ್.: ಬಸವರಾಜದೇವರ ರಗಳೆ . ಪು.ಸಂ.22 ಬಸವ ಸಮಿತಿ, ಬಸವ ಭವನ ಬೆಂಗಳೂರು.
3 ಅಕ್ಕಮಹಾದೇವಿ ಅನಂತಪೂರ: ಹರಿಹರನ ಬಸವರಾಜದೇವರ ರಗಳೆ . ಪು. 6 ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.
4 ದೇವೀರಪ್ಪ ಎಚ್: ಬಸವರಾಜದೇವರ ರಗಳೆ . ಪು.21 . ಬಸವ ಸಮಿತಿ, ಬಸವ ಭವನ ಬೆಂಗಳೂರು.
5 ದೇವೀರಪ್ಪ ಎಚ್: ಬಸವರಾಜದೇವರ ರಗಳೆ . ಪು.21 . ಬಸವ ಸಮಿತಿ, ಬಸವ ಭವನ ಬೆಂಗಳೂರು.